ವಿಜಯವಾಣಿ
ಕನ್ನಡಿಗರ ಧ್ವನಿ

ನಾಲ್ಕು ದಿನ ನಡೆದ ಅದ್ದೂರಿ ಕಾರ್ಯಕ್ರಮ | ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗಿ

# ಸಿಎಂಎಸ್ ಜೈನ್ ಕಾಲೇಜು ಸ್ಪರ್ಧೆಗೆ ತೆರೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಲಾಲ್‌ಬಾಗ್ ರಸ್ತೆಯಲ್ಲಿರುವ ಸಿಎಂಎಸ್ ಜೈನ್ ಕಾಲೇಜಿನ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸೆಂಟರ್ ವಿಭಾಗ, ವಿಜಯವಾಣಿ ಮತ್ತು ದಿಗ್ವಿಜಯ 24X7 ನ್ಯೂಸ್ ಸಹಯೋಗದೊಂದಿಗೆ ಆಯೋಜಿಸಿದ್ದ ನಾಲ್ಕು ದಿನಗಳ ವಿವಿಧ ಸ್ಪರ್ಧೆಗಳ ಮೇಳಕ್ಕೆ ಶನಿವಾರ ಸಂಭ್ರಮದ ತೆರೆ ಬಿದ್ದಿದೆ.

ಮೊದಲ ಎರಡು ದಿನಗಳಲ್ಲಿ ಮ್ಯಾನೇಜ್‌ಮೆಂಟ್ ಫೆಸ್ಟ್ ನಡೆಸಿದ್ದು, ಎಚ್.ಆರ್, ಮಾರ್ಕೆಟಿಂಗ್, ಹಣಕಾಸು ವಿಭಾಗದಲ್ಲಿ ಹಲವಾರು ಸ್ಪರ್ಧೆಗಳನ್ನು ಆಯೋಜಿಸಿತ್ತು. ಇದು ಅಂತರ ಕಾಲೇಜು ಸ್ಪರ್ಧೆಯಾಗಿದ್ದು, ಜೈನ್ ಕಾಲೇಜಿನ ಆವರಣದಲ್ಲಿ ನಡೆಯಿತು.

ದಿಗ್ವಿಜಯ 24X7 NEWS ವಿಜಯವಾಣಿ ಮಾಧ್ಯಮ ಸಹಯೋಗ

ಉಳಿದ ಎರಡು ದಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧೆ 'ಲಾಸ್ಯ' ಶೀರ್ಷಿಕೆಯಲ್ಲಿ ಜೆ.ಪಿ. ನಗರದ ಎಂಎಲ್‌ಆರ್ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಿತು. ನೃತ್ಯ, ಗಾಯನ, ಸಾಮೂಹಿಕ ನೃತ್ಯ, ಪಾಶ್ಚಾತ್ಯ ನೃತ್ಯ, ಮ್ಯಾಡ್ ಆ್ಯಡ್, ಫ್ಯಾಷನ್ ಶೋ ಸ್ಪರ್ಧೆಗಳು ನಡೆಯಿತು. ವಿವಿಧ ಕಾಲೇಜಿನಿಂದ ಆಗಮಿಸಿದ್ದ ವಿದ್ಯಾರ್ಥಿಗಳು ತಮ್ಮ ನೃತ್ಯ ತಂಡ ವೇದಿಕೆಗೆ ಆಗಮಿಸುತ್ತಿದ್ದಂತೆಯೇ ಚಪ್ಪಾಳೆ ಮೂಲಕ ಪ್ರೋತ್ಸಾಹಿಸಿದರು. ಉಳಿದ ತಂಡಗಳ ಪ್ರದರ್ಶನವನ್ನು ಆಸ್ವಾದಿಸಿದರು.

» ಸಾಮೂಹಿಕ ನೃತ್ಯ, ಫ್ಯಾಷನ್ ಶೋ ಸ್ಪರ್ಧೆ

ಕಳೆದ ನಾಲ್ಕೂ ದಿನಗಳಲ್ಲಿ ಅಂದಾಜು 30ಕ್ಕೂ ಹೆಚ್ಚಿನ ಸ್ಪರ್ಧೆಗಳು ನಡೆದವು. ಸಾಂಸ್ಕೃತಿಕ ಮತ್ತು ಮ್ಯಾನೇಜ್‌ಮೆಂಟ್ ಸ್ಪರ್ಧೆಗಳ ಮೊತ್ತವಾಗಿ ತಲಾ 1 ಲಕ್ಷ ರೂ. ಮೀಸಲಿಟ್ಟಿತ್ತು. ನೃತ್ಯಗಳ ಪ್ರದರ್ಶನಕ್ಕೆ ತೀರ್ಪುಗಾರರಾಗಿ ಸಮಕಾಲೀನ ನೃತ್ಯ ಸಂಯೋಜಕ ಕುನ್ವರ್ ಅಮರ್ ಮತ್ತು ಫ್ಯಾಷನ್ ಶೋ ಸ್ಪರ್ಧೆ ತೀರ್ಪುಗಾರರಾಗಿ ನಟ ಇಂದ್ರಜಿತ್ ಲಂಕೇಶ್ ಆಗಮಿಸಿದ್ದರು.

ಸ್ಪರ್ಧೆಯ ಕೊನೇ ದಿನವಾದ ಶನಿವಾರ 'ಫೈನಾಪಲ್ ಎಕ್ಸ್‌ಪ್ರೆಸ್' ಎಂಬ ಬ್ಯಾಂಡ್ ತಂಡ ವಿದ್ಯಾರ್ಥಿಗಳಿಗೆ ಸಂಗೀತ ರಸದೌತಣವನ್ನು ಉಣಬಡಿಸಿತು.





ಸಿಎಂಎಸ್ ಜೈನ್ ಕಾಲೇಜಿನಲ್ಲಿ ನಡೆದ ಅಂತರ ಕಾಲೇಜು ಸ್ಪರ್ಧೆಯಲ್ಲಿ ನೃತ್ಯ ಪ್ರದರ್ಶಿಸಿದ ಕಾಲೇಜು ವಿದ್ಯಾರ್ಥಿನಿಯರು.